ಈ) ಯಾವ ಆಧಾರದ ಮೇಲೆ ಈ ಕಾಮಗಾರಿಯನ್ನು ನೀಡಲಾಗಿದೆ? ಟೆಂಡರ್ ಗುತ್ತಿಗೆ, ತುಂಡು ಗುತ್ತಿಗೆ ಅಥವಾ ವಿಶೇಷ ಯೋಜನೆಯಡಿ ನೀಡಲಾಗಿದೆಯೇ? ವಿವರ ನೀಡುವುದು:

ಉ) ಈ ಕಾಮಗಾರಿಯು ಮಹಾನಗರ ಪಾಲಿಕೆ ಹಾಗೂ ಸರ್ಕಾರದಿಂದ ಅನುಮೋದನೆಗೊಂಡಿದೆಯೇ? ಹೌದಾದಲ್ಲಿ, ವಿವರಗಳನ್ನು ಒದಗಿಸುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ದಿನಾಂಕ: 12-4-2003 ರಂದು ಪ್ರಾರಂಭಿಸಲಾಯಿತು.

ಆ) ರೂ. 70.00 ಕೋಟಿ.

ಇ) ಕರ್ನಾಟಕ ಭೂಸೇನಾ ನಿಗಮದವರಿಗೆ ನೀಡಲಾಗಿದೆ.

ಈ) ಕರ್ನಾಟಕ ಪಾರದರ್ಶಕ ಕಾಯ್ದೆ 1999ರ ಸೆಕ್ಷನ್ -4 ರ ಪ್ರಕಾರ ಸರ್ಕಾರಿ ಸಂಸ್ಥೆಯಿಂದ ಹಾಗೂ ಸರ್ಕಾರದ ಅಧೀನಕ್ಕೊಳಪಟ್ಟ ಸಂಸ್ಥೆಯಿಂದ ಕಾರ್ಯನಿರ್ವಹಿಸಲು ಟೆಂಡರು ಕರೆಯದೆ ಕಾಮಗಾರಿ ವಹಿಸಲು ಸೌಲಭ್ಯವಿರುವುದರಿಂದ, ಅದರಂತೆ ಸರ್ಕಾರದ ಅಧೀನ ಸಂಸ್ಥೆಯಾದ ಕರ್ನಾಟಕ ಭೂಸೇನಾ ನಿಗಮಕ್ಕೆ ಕೆಲಸವನ್ನು ವಹಿಸಲಾಗಿದೆ.

ಉ) ಈ ಕಾಮಗಾರಿಗೆ ಬೆಂಗಳೂರು ಮಹಾನಗರ ಪಾಲಿಕೆಯು ಸಭೆಯು ದಿನಾಂಕ: 20-7-2002 ರಂದು ವಿಷಯ ಸಂ. 63(97) ರಲ್ಲಿ ಮಂಜೂರಾತಿಯನ್ನು ನೀಡಿರುತ್ತದೆ.

ಕೆ.ಯು.ಐ.ಡಿ.ಎಫ್.ಸಿ. ಮೆಗಾಸಿಟಿ ಯೋಜನೆ ಅನುಮೋದನೆ ಸಮಿತಿಯ 13ನೇ ಸಭೆಯ ದಿನಾಂಕ: 30-8-2002ರಂದು ವಿಷಯ ಸಂ.6(ಡಿ) ರಲ್ಲಿ ಅನುಮೋದನೆ ನೀಡಿರುತ್ತದೆ. ಸರ್ಕಾರದ ಆದೇಶ ಸಂ. ಹೆಚ್.ಯುಡಿ 478 ಎಂಎನ್‌ವೈ 93 ದಿನಾಂಕ: 22-6-1995ರ ಪ್ರಕಾರ ಮೆಗಾಸಿಟಿ ಅನುಮೋದನಾ ಸಮಿತಿಯು ಅನುಮೋದನೆ ನೀಡಿದ ಕಾಮಗಾರಿಗೆ ಪ್ರತ್ಯೇಕವಾಗಿ ಸರ್ಕಾರದ ಮಂಜೂರಾತಿಯ ಅಗತ್ಯವಿರುವುದಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ಆದಾಯದ ವಿವರ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ ಮೊತ್ತದ ಬಗ್ಗೆ

2589(2757) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಬೆಂಗಳೂರು ಮಹಾನಗರ ಪಾಲಿಕೆಯ ಒಟ್ಟು ವಾರ್ಷಿಕ ಆದಾಯವೆಷ್ಟು;

ಆ) ಅದರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ ಒಟ್ಟು ಮೊತ್ತವೆಷ್ಟು;

ಇ) ಅಭಿವೃದ್ಧಿ ಕಾರ್ಯಗಳ ಹೊರತಾಗಿ ನಗರ ಪಾಲಿಕೆಯ ಸಿಬ್ಬಂದಿ ನಿರ್ವಹಣೆ ಮತ್ತು ಇತರೇ ವೆಚ್ಚಗಳು ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವರಮಾನ ಈ ಕೆಳಕಂಡಂತೆ ಇದೆ:

		(ರೂ. ಲಕ್ಷಗಳಲ್ಲಿ)
2000-01	-	54715.22
2001-02	-	45533.62
2002-03	-	63059.54

ಆ) ಅಭಿವೃದ್ಧಿ ಕಾರ್ಯಗಳಿಗೆ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

2000–01	–	31207.46
2001–02	–	26313.16
2002–03	–	28701.35

ಇ) ಸಿಬ್ಬಂದಿ ನಿರ್ವಹಣೆ ವೆಚ್ಚ ಮತ್ತು ಇತರೆ ವೆಚ್ಚಗಳು ಈ ಕೆಳಗಿನಂತಿರುತ್ತದೆ:

(ರೂ. ಲಕ್ಷಗಳಲ್ಲಿ)

	ಸಿಬ್ಬಂದಿ	ಇತರೆ	ಒಟ್ಟು
2000–01	10034.01	14252.03	24286.04
2001–02	10976.58	10847.97	21824.55
2002–03	11050.86	23963.20	35014.06

ಬೆಂಗಳೂರು ಮಹಾನಗರ ಪಾಲಿಕೆಯ ಅಭಿವೃದ್ಧಿ ಕಾರ್ಯಗಳು

2590(2758) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಅಭಿವೃದ್ಧಿ ಕಾರ್ಯಗಳಿಗೆ ಯಾವ ಯಾವ ಉದ್ಯಮಿಗಳು ಹಾಗೂ ಇತರೇ ಸಂಘ–ಸಂಸ್ಥೆಗಳು ಸಹಾಯ ನೀಡಿರುತ್ತಾರೆ;

ಆ) ನೀಡಿದ್ದಲ್ಲಿ, ಸಹಾಯಧನದ ಮೊತ್ತ ಹಾಗೂ ಈ ಹಣದಿಂದ ಅಭಿವೃದ್ಧಿಪಡಿಸಿದ ಕಾರ್ಯ ಯೋಜನೆಗಳ ಪೂರ್ಣ ವಿವರ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆ ಪಾಲುದಾರಿಕೆ ಆಧಾರದ ಮೇಲೆ ಬಿ.ಎ.ಟಿ.ಎಫ್.ನ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಈ ಸಹಯೋಗಕ್ಕೆ ಯಾವುದೇ ಆರ್ಥಿಕ ನೆರವು ನೀಡಿರುವುದಿಲ್ಲ. ಆದರೆ, ಈ ಕೆಳಕಂಡಂತೆ ವಸ್ತುಗಳ ರೂಪದಲ್ಲಿ ಸಹಾಯ ಮಾಡಿರುತ್ತಾರೆ:

1. ಸ್ವಚ್ಛ ಬೆಂಗಳೂರು ಕಾರ್ಯಕ್ರಮದಲ್ಲಿ 200 ತಳ್ಳುವ ಗಂಟೆ ಗಾಡಿಗಳು, 6 ಆಟೋ–ಟಿಪ್ಪರುಗಳು ಹಾಗೂ ಹೆಲ್ತ್ ನೆಟ್ ಅನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಸಹಯೋಗದ ನಿಮಿತ್ತ ನೀಡಿರುತ್ತಾರೆ.

2. ಅದೇ ರೀತಿ ನಿರ್ಮಲ ಬೆಂಗಳೂರು ಶೌಚಾಲಯ ನಿರ್ಮಾಣದ ಅಡಿಯಲ್ಲಿ 100 ನಿರ್ಮಲ ಬೆಂಗಳೂರು ಶೌಚಾಲಯಗಳನ್ನು ನಿರ್ಮಿಸುವುದಾಗಿ ಬಿ.ಎ.ಟಿ.ಎಫ್. ತಿಳಿಸಿದ್ದು, ಈ ಪೈಕಿ 23 ನಿರ್ಮಲ ಬೆಂಗಳೂರು ಶೌಚಾಲಯಗಳನ್ನು ಪೂರ್ಣಗೊಳಿಸಿ, ಬೆಂಗಳೂರು ಶೌಚಾಲಯಗಳನ್ನು ಪೂರ್ಣಗೊಳಿಸಿ, ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುತ್ತಾರೆ. ಶ್ರೀಮತಿ ಸುಧಾಮೂರ್ತಿ ಯವರು ಈ ಶೌಚಾಲಯಗಳಿಗೆ ರೂ. 800.00 ಲಕ್ಷ ರೂ.ಗಳನ್ನು ನೀಡುವುದಾಗಿ ಆಶ್ವಾಸನೆ ನೀಡಿರುತ್ತಾರೆ.

3. ಇದರ ಜೊತೆಗೆ ಖಾಸಗಿ ಸಂಘ–ಸಂಸ್ಥೆಗಳು

9 – ಬುಲೇವಾರ್ಡುಗಳು,

43 – ವೃತ್ತಗಳು,